
# ಕಾರಿಂಜೇಶ್ವರದ 'ಕಾರಿಂಜ ದಡ್ಡ'

ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಕಾರಿಂಜ ಎಂಬ ಪುಟ್ಟ ಊರಿನಲ್ಲಿ ಶ್ರೀ ಕಾರಿಂಜೇಶ್ವರ ದೇವಾಲಯವಿದೆ. ಶಿವನ ಈ ಮಂದಿರವು ಕೋಡಿಮಲೆ ಎಂಬ ಪರ್ವತ ಶ್ರೇಣಿಯಲ್ಲಿದ್ದು, ಸಮುದ್ರಮಟ್ಟದಿಂದ ಸುಮಾರು 1 ಸಾವಿರ ಅಡಿ ಎತ್ತರದಲ್ಲಿರುವ ಕಾರಿಂಜ ಬೆಟ್ಟದಲ್ಲಿ ತಲೆಯೆತ್ತಿ ಭಕ್ತಾದಿಗಳನ್ನು ಆಕರ್ಷಿಸುತ್ತಿದೆ.

ಪ್ರಾಕೃತಿಕ ಸೌಂದರ್ಯವೇ ಮೈವೆತ್ತಂತೆ ಕಾಣುವ ಈ ಮಂದಿರವನ್ನು ತಲುಪಲು 600 ಮೆಟ್ಟಿಲುಗಳನ್ನು ಹತ್ತಬೇಕಾಗುತ್ತದೆ. ಕಾರಿಂಜೇಶ್ವರ ದೇವಾಲಯವನ್ನು ಎರಡು ಭಾಗಗಳಲ್ಲಿ ನಿರ್ಮಿಸಲಾಗಿದೆ. ಇಲ್ಲಿನ ಪ್ರಮುಖ ಶಿವ ದೇವಾಲಯವು ಬಂಡೆಯ ತುತ್ತ ತುದಿಯಲ್ಲಿದ್ದು, ಇನ್ನೊಂದು ಮಂದಿರವು ಮಹಾಗಣಪತಿ ಮತ್ತು ಪಾರ್ವತಿ ದೇವಿಗೆ ಮೀಸಲಾಗಿದೆ. ಇದು ಬೆಟ್ಟದುತ್ತುಂಗಕ್ಕೆ ಸಾಗುವ ದಾರಿಮಧ್ಯದಲ್ಲಿದೆ. ಬೆಟ್ಟದ ತಪ್ಪಲಲ್ಲಿರುವ ಗದಾ ತೀರ್ಥವೆಂಬ ವಿಶಾಲ ಸರೋವರವು ವಿಶೇಷ ಆಕರ್ಷಣೆಯಾಗಿದೆ. ಇದು ಮಹಾಭಾರತದ ಭೀಮನ ಗದೆಯಿಂದ ಸೃಜಿಸಿದ ಕೆರೆಯೆಂದು ಪುರಾಣ ಕಥೆ ಸಾರುತ್ತದೆ. ಉಂಗುಷ್ಟ ತೀರ್ಥವೆಂಬ ಇನ್ನೊಂದು ಚಿಕ್ಕ ಕೆರೆಯು ಬೆಟ್ಟದ ನಡುಭಾಗದಲ್ಲಿದೆ.

'ವಾನರ ಅನ್ನ ಸೇವೆ'ಯು ಈ ಕ್ಷೇತ್ರದ ಇನ್ನೊಂದು ಪ್ರಮುಖ ಆಕರ್ಷಣೆ. ಶಿವನ ದೇವಸ್ಥಾನದ ಸುತ್ತಮುತ್ತ ಅಸಂಖ್ಯಾತ ಕಪಿಗಳು ವಾಸವಿದ್ದು, ಅವು ಪ್ರತಿನಿತ್ಯ ಮಧ್ಯಾಹ್ನದ ಪೂಜೆಯ ಸಮಯಕ್ಕೆ ಮಂದಿರದೆದುರಿನಲ್ಲಿಟ್ಟಿರುವ ಆಯತಾಕಾರದ ಬೃಹತ್ ಕಲ್ಲು ಚಪ್ಪಡಿಯ ಬಳಿ ಸೇರುತ್ತವೆ. ಪೂಜೆಯ ನಂತರ ಮೊಟ್ಟಮೊದಲು ನೈವೇದ್ಯದ ಅನ್ನವನ್ನು ವಾನರ ಸಮೂಹಕ್ಕೆ ಪ್ರಸಾದ ರೂಪದಲ್ಲಿ ಬಡಿಸಲಾಗುತ್ತದೆ. ವಿಶೇಷವೆಂದರೆ ಕಪಿ ಸೈನ್ಯದ ಮುಖಂಡನೆನಿಸಿರುವ 'ಕಾರಿಂಜ ದಡ್ಡ' ನಾಮಾಂಕಿತ ಹನುಮ, ನೈವೇದ್ಯದ ಮೊದಲ ತುತ್ತನ್ನು ಸ್ವೀಕರಿಸುತ್ತದೆ. ಆ ಬಳಿಕ ಮಿಕ್ಕ ಕಪಿಗಳು ಪ್ರಸಾದಕ್ಕೆ ಮುಗಿಬೀಳುವುದನ್ನು ವೀಕ್ಷಿಸಬಹುದು. ಇದು ಭಕ್ತಾದಿಗಳ ಕಣ್ಣಿಗೆ ಹಬ್ಬದಂತೆ ಕಾಣುತ್ತದೆ.

**–ರಮಣ್ ಶೆಟ್ಟಿ ರೆಂಜಾಳ್, ಮುಂಬೈ**







# ರಾಜಹಂಸಗಳ ದುರ್ಮರಣ

ಪ್ರಕೃತಿಯ ಸೌಂದರ್ಯವನ್ನು ದ್ವಿಗುಣಗೊಳಿಸುವ ಆಭರಣಗಳೇ ಪಕ್ಷಿಗಳು. ಅದರಲ್ಲೂ ಮೂರ್ನಾಲ್ಕು ಅಡಿ ಎತ್ತರದ ನಿಲುವಿನ, ಗುಲಾಬಿ ಗರಿಗಳ ಹೊದಿಕೆಯ ನೀಳ ಕಾಲ್ಗಳ, ಉದ್ದನೆಯ ಕತ್ತನ್ನು ಅತ್ತಿತ್ತ ಕೊಂಕಿಸಿ ರಾಜಗಾಂಭೀರ್ಯದಿಂದ ನಡೆಯುವ ರಾಜಹಂಸಗಳು ಸೌಂದರ್ಯಕ್ಕೆ ಮತ್ತೊಂದು ಹೆಸರಾಗಿರುವಂಥವು. ಸದಾ ಗುಂಪುಗುಂಪಾಗಿರುವ ಈ ಹಕ್ಕಿಗಳು ಗುಜರಾತಿನಿಂದ ನಮ್ಮ ಭಾಗಕ್ಕೆ ಆಂತರಿಕ ವಲಸೆ ಬರುತ್ತವೆ. ತುಂಗಭದ್ರೆಯ ಹಿನ್ನೀರಿಗಿಳಿದು ತಮ್ಮ ಪಾದಗಳಿಂದ ನೀರನ್ನು ಕದಡುತ್ತವೆ. ಕದಡಿದ ನೀರನ್ನು ತಮ್ಮ ಉದ್ದನೆಯ ಕೊಕ್ಕಿನಲ್ಲಿರುವ ವಿಶಿಷ್ಟ ಜರಡಿಗಳಿಂದ ಶೋಧಿಸಿ ಉಳಿದ ಪಾಚಿ, ಮೃದ್ವಂಗಿ ಮುಂತಾದ ಶೇಷವನ್ನು ಹೊಟ್ಟೆಗೆ ಸೇರಿಸುತ್ತವೆ.

ಮಣ್ಣಿನ ದಿಬ್ಬದ ಮೇಲೆ ಕೇವಲ ಒಂದೇ ಮೊಟ್ಟೆ ಇಡುವ ಇವುಗಳ ಜೀವತಾವಧಿ ಸರಾಸರಿ 30–40 ವರ್ಷಗಳು. ಇವುಗಳಿಗೆ ಇಂದು ಪ್ರಧಾನ ಕಂಟಕಗಳೆಂದರೆ ಅವುಗಳ ಆವಾಸಸ್ಥಾನದ ಅತಿಕ್ರಮಣ ಹಾಗೂ ಜಲಮಾಲಿನ್ಯ. ಇವೆರಡೂ ಮನುಷ್ಯನ ಕುಕೃತ್ಯಗಳೇ ಆಗಿವೆ. ಚಿತ್ರದಲ್ಲಿ ನೆಲಕ್ಕೊರಗಿರುವ ಈ ಹಕ್ಕಿಗಳ ಕಥೆಗೂ ಮನುಷ್ಯನೇ ಖಳನಾಯಕ. ಅತೀ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಅನ್ನು ಹೊತ್ತೊಯ್ಯುವ ಬೃಹತ್ ವಿದ್ಯುತ್ ಕಂಬಗಳು ಹಾಗೂ ಅವುಗಳ ತಂತಿಗಳಿಗೆ ಪ್ರತಿ ದಿನ ಡಿಕ್ಕಿ ಹೊಡೆದು ಸಾವನ್ನಪ್ಪುವ ಅನೇಕ ವಲಸೆ ಹಕ್ಕಿಗಳಿಗೆ ಇವುಗಳದೂ ಒಂದು ಹೆಚ್ಚುವರಿ ಸೇರ್ಪಡೆ. ಅಭಿವೃದ್ಧಿಯ ಹೆಸರಿನಲ್ಲಿ ಆಳುವ ವರ್ಗದವರು ಕೈಗೊಳ್ಳುವ ಅವಾಂತರಕಾರಿ ಯೋಜನೆಗಳಿಂದ ಈ ಮುಗ್ಧಜೀವಿಗಳು ದಾರುಣವಾಗಿ ಸಾಯುತ್ತಿವೆ. ಅಂದಹಾಗೆ ರಾಜಹಂಸಗಳು ಹೀಗೆ ಸತ್ತು ಬಿದ್ದದ್ದು ತುಂಗಭದ್ರೆಯ ಹಿನ್ನೀರಿನ ಭಾಗದಲ್ಲಿ.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**



